# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕೋರಮಂಗಲ ಉಪ–ವಿಭಾಗದ, ಈಜೀಪುರ ವಾರ್ಡ್ ಸಂಖ್ಯೆ–148 ದಿನಾಂಕ:09–12–2020 ರಂದು**

**ಡಿಸೆಂಬರ್–2020 ರ ವಾರ್ಡ್ ಸಮಿತಿಯ ಮಾಸಿಕ ಸಭೆಯ ನಡವಳಿಗಳು**

ಡಾ॥ ಅಶೋಕ್ ಡಿ.ಆರ್, ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148ರ ರವರ ಅಧ್ಯಕ್ಷತೆಯಲ್ಲಿ ರಂಗಮಂದಿರ, ಎಸ್.ಟಿ. ಬೆಡ್, ಈಜೀಪುರದಲ್ಲಿ ದಿನಾಂಕ:09.12.2020 ರಂದು 10.30 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದ ಸದಸ್ಯರು:–**

1. ಶ್ರೀ ಶಂಕರಪ್ಪ ರೆಡ್ಡಿ, ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ
2. ಶ್ರೀ ರಾಜೇಂದ್ರ ಬಾಬು, ಎಸ್.ಟಿ. ಬೆಡ್ ಪ್ರದೇಶ, ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ
3. ಶ್ರೀ ಪ್ರಕಾಶ ರೆಡ್ಡಿ, ಎಸ್.ಟಿ. ಬೆಡ್ ಪ್ರದೇಶ, ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ
4. ಶ್ರೀ ಅನಿಲ್ ಕುಮಾರ್, ಅಶ್ವಿನಿ ಲೇಔಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ
5. ಶ್ರೀ ಎಸ್. ಸುರೇಶ್ ಕುಮಾರ್
6. ಶ್ರೀ ವಸಂತ ಕುಮಾರ್

**ಹಾಜರಿದ್ದ ಅಧಿಕಾರಿಗಳು:–**

1. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್–148 ಈಜೀಪುರ
2. ಶ್ರೀ ಎಸ್. ಕುಮಾರ್‌ವೇಲ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–148
3. ಶ್ರೀ ರುದ್ರೇಶ್, ಸಹಾಯಕ ಅಭಿಯಂತರರು
4. ಶ್ರೀ ಅಶೋಕ್ .ವಿ, ಬಿಡಬ್ಲ್ಯೂಎಸ್.ಎಸ್.ಬಿ
5. ಶ್ರೀ ಟಿ. ನಾಗರಾಜ್, ತೆರಿಗೆ ನಿರೀಕ್ಷಕರು, ವಾರ್ಡ್–148
6. ಶ್ರೀ ಅತಾಹುಲ್ಲಾ, ತೆರಿಗೆ ನಿರೀಕ್ಷಕರು
7. ಶ್ರೀ ವೆಂಕಟೇಶ್
8. ಶ್ರೀ ಮಲ್ಲಿಕಾರ್ಜುನಯ್ಯ, ಎ.ಎಸ್.ಐ
9. ಶ್ರೀ ಎಸ್. ನವೀನ್, ಕಿರಿಯ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
10. ಶ್ರೀ ಮುತ್ತುರಾಜ್, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–148

* * * * *

ಡಾ॥ ಅಶೋಕ್ ಡಿ.ಆರ್, ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148 ರವರು ಸಭೆಗೆ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ಹಿಂದಿನ ಸಭೆಯ ನಡವಳಿಗಳಿಗೆ ಸಂಬಂಧಿಸಿದಂತೆ ಆಯಾ ಇಲಾಖೆಗಳ ವತಿಯಿಂದ ತೆಗೆದುಕೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ನಂತರ ಸಭೆಗೆ ಗೈರು ಹಾಜರಾಗಿದ್ದಂತಹ ಅರಣ್ಯಾಧಿಕಾರಿಗಳು(ಬಿ.ಬಿ.ಎಂ.ಪಿ) ಮತ್ತು ಸ.ಕಾ.ನಿ. ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಸ.ಕಾ.ನಿ. ಬೆಸ್ಕಾಂ ರವರಿಗೆ ದೂರವಾಣಿ ಕರೆ ಮಾಡಿ ವಾರ್ಡ್ ಸಮಿತಿ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಿದರು.

ಶ್ರೀ ರಾಜೇಂದ್ರ ಬಾಬು ರವರು ಮಾತನಾಡಿ, ಎಸ್.ಟಿ. ಬೆಡ್ ಪ್ರದೇಶದಲ್ಲಿ ಕುಡಿಯುವ ನೀರು ಕಲುಷಿತಗೊಂಡಿರುವ ಪ್ರದೇಶಗಳನ್ನು ಗುರುತಿಸಲಾಗಿದ್ದು, ಸದರಿ ಸಮಸ್ಯೆಯನ್ನು ಸರಿಪಡಿಸುವವರೆಗೂ ಸಾಕಷ್ಟು ಕುಡಿಯುವ ನೀರನ್ನು ಪ್ರದೇಶದ ಜನರಿಗೆ ಒದಗಿಸಲು ಸೂಚಿಸಿದರು.

ಕ್ರಮ: ಸ.ಕಾ.ನಿ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ.



Scanned by CamScanner

ಶ್ರೀ ರಾಜೇಂದ್ರ ಬಾಬು ರವರು ಮಾತನಾಡಿ, ಚಂದ್ರಾರೆಡ್ಡಿ ಲೇಔಟ್‌ನಲ್ಲಿ ಸ್ಥಳವನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ಒಣಗಿರುವ ಮರದ ಕೊಂಬೆಗಳನ್ನು ಕತ್ತರಿಸಲು ಸಭೆಯಲ್ಲಿ ತಿಳಿಸಿದರು. ಅರಣ್ಯಾಧಿಕಾರಿಗಳು ಸಭೆಯಲ್ಲಿ ಹಾಜರಿಲ್ಲದ ಕಾರಣ, ಡಾ॥ ಅಶೋಕ್ ಡಿ.ಆರ್, ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ದೂರವಾಣಿ ಮುಖಾಂತರ ಅರಣ್ಯಾಧಿಕಾರಿಗಳು(ದಕ್ಷಿಣ) ಆದ ಶ್ರೀ ನರೇಂದ್ರಬಾಬು ರವರೊಂದಿಗೆ ಮಾತನಾಡಿ, ಸದರಿ ಸಮಸ್ಯೆಯನ್ನು ಬಗೆಹರಿಸಲು ಸೂಚಿಸಿದರು ಹಾಗೂ ಮುಂದಿನ ಸಭೆಗಳಿಗೆ ಗೈರುಹಾಜರಾಗದಂತೆ ಸೂಚಿಸಿದರು.

ಕ್ರಮ: ಅರಣ್ಯಾಧಿಕಾರಿಗಳು(ದಕ್ಷಿಣ)

ಶ್ರೀ ಶಂಕರಪ್ಪ ರವರು ಮಾತನಾಡಿ, ಸೊಳ್ಳೆ ನಿಯಂತ್ರಣಕ್ಕಾಗಿ ಫಾಗಿಂಗ್ ಹಾಗೂ ಸ್ಪ್ರೇಯಿಂಗ್ ಸಮರ್ಪಕವಾಗಿ ಆಗದಿರುವ ಬಗ್ಗೆ ಅಧ್ಯಕ್ಷರ ಗಮನಕ್ಕೆ ತಂದರು. ಈ ಬಗ್ಗೆ ಪದೇ ಪದೇ ಹಲವಾರು ಬಾರಿ ದೂರುಗಳು ಬರುತ್ತಿರುವ ಬಗ್ಗೆ ನೋಡಲ್ ಅಧಿಕಾರಿಯವರು ಗುತ್ತಿಗೆದಾರರನ್ನು ಬದಲಾಯಿಸಿ, ಹೊಸ ಗುತ್ತಿಗೆದಾರರನ್ನು ನೇಮಿಸಲು ಹಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ತಿಳಿಸಿದರು.

ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು (ಆರೋಗ್ಯ ಇಲಾಖೆ)

ಶ್ರೀ ರಾಜೇಂದ್ರ ಬಾಬು ರವರು ಮಾತನಾಡಿ, ವಾರ್ಡ್ ವ್ಯಾಪ್ತಿಯು ದೊಡ್ಡದಾಗಿದ್ದು, ಯಾವುದೇ ಕೆಲಸ ಪರಿವೀಕ್ಷಕರು ಇಲ್ಲದೇ ಇರುವುದರಿಂದ ಕಾಮಗಾರಿಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವ ಸಲುವಾಗಿ ಕೆಲಸ ಪರಿವೀಕ್ಷಕರನ್ನು ನೇಮಿಸುವಂತೆ ತಿಳಿಸಿದರು.

ಕ್ರಮ: ಸ.ಕಾ.ನಿ.ಅ (ಕಾಮಗಾರಿ ಇಲಾಖೆ)

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಎನ್.ಜಿ.ವಿ. ಬಡಾವಣೆಯಲ್ಲಿನ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಎನ್.ಜಿ.ವಿ. ಬಡಾವಣೆಯಿಂದ ಹೊರಗಡೆ ಜಿ.ಜಿ.ಎಂ.ಪಿ ಕಟ್ಟಡಕ್ಕೆ ವರ್ಗಾಯಿಸಿದಲ್ಲಿ ವಾರ್ಡ್ ವ್ಯಾಪ್ತಿಯ ಸಾರ್ವಜನಿಕರಿಗೆ ಉಪಯುಕ್ತವಾಗಿರುತ್ತದೆ ಎಂದು ಈ ಬಗ್ಗೆ ಮಾನ್ಯ ಹೈಕೋರ್ಟ್‌ನ ರಿಜಿಸ್ಟ್ರಾರ್ ರವರು ನೀಡಿರುವ ಪತ್ರವನ್ನು ಶ್ರೀ ಕುಮಾರ್‌ವೇಲು, ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸ್ಥಳೀಯ ಶಾಸಕರ ಗಮನಕ್ಕೆ ತಂದು ಕ್ರಮ ಕೈಗೊಳ್ಳಲು ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಸೂಚಿಸಿದರು.

ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು (ಆರೋಗ್ಯ ಇಲಾಖೆ)

ಡಾ॥ ಅಶೋಕ್ ಡಿ.ಆರ್, ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ರವರು ಮಾತನಾಡಿ, ಬ್ಲಾಕ್‌ಸ್ಪಾಟ್‌ಗಳಲ್ಲಿ ಕಸ ವಿಲೇವಾರಿಯನ್ನು ಬೆಳಗ್ಗೆ ತೆಗೆದ ನಂತರ ಮತ್ತೊಮ್ಮೆ ಬ್ಲಾಕ್‌ಸ್ಪಾಟ್‌ಗಳು ಉಂಟಾಗುತ್ತಿರುವ ಕಾರಣ ಮತ್ತೆ ಬೆಳಗ್ಗೆ 11.00 ಗಂಟೆಯ ನಂತರದಲ್ಲಿ ಕಸವನ್ನು ತೆರವುಗೊಳಿಸಲು ಹಾಗೂ ಬ್ಲಾಕ್‌ಸ್ಪಾಟ್‌ಗಳಲ್ಲಿ ದಂಡವನ್ನು ವಿಧಿಸಲು ಮಾರ್ಷಲ್‌ಗಳನ್ನು ಸಮರ್ಪಕವಾಗಿ ಬಳಸಲು ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ತಿಳಿಸಿದರು.

ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು (ಆರೋಗ್ಯ ಇಲಾಖೆ)

ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು (ಆರೋಗ್ಯ ಇಲಾಖೆ)

ಈಜೀಪುರ ವಾರ್ಡ್ ಕಛೇರಿ ಮುಂಭಾಗ ಮರಳು ಮತ್ತು ಜೆಲ್ಲಿ ಲಾರಿಗಳನ್ನು ನಿಲ್ಲಿಸಿ, ಸ್ಥಳದಲ್ಲಿ ಮಾರಾಟ ಮಾಡುತ್ತಿದ್ದು, ಸಾರ್ವಜನಿಕರಿಗೆ/ ಪಾದಚಾರಿಗಳಿಗೆ ತೊಂದರೆಯಾಗುವುದನ್ನು ತಪ್ಪಿಸಲು ಲಾರಿಗಳನ್ನು ತೆರವುಗೊಳಿಸಲು ಹಾಗೂ ಸೈಲೆನ್ಸರ್ ಮಾರ್ಪಾಡು ಮಾಡಿಕೊಂಡು ಅನಗತ್ಯವಾಗಿ ಹೆಚ್ಚುವರಿ ಶಬ್ದ ಮಾಲಿನ್ಯ ಉಂಟು ಮಾಡುವ ಬೈಕ್ ಸವಾರರು ಮತ್ತು ಧ್ವನಿವರ್ಧಕಗಳನ್ನು ಅಳವಡಿಸಿಕೊಂಡು ಬೀದಿ ವ್ಯಾಪಾರಿಗಳಿಗೆ ಕಡಿವಾಣ ಹಾಕಲು ಪೋಲಿಸ್ ಇಲಾಖೆಗೆ ಸೂಚಿಸಿದರು.

ಕ್ರಮ: ಆರಕ್ಷಕ ನಿರೀಕ್ಷಕರು (ವಿವೇಕಾನಗರ ಪೋಲಿಸ್ ಠಾಣೆ)



Scanned by CamScanner

ಡಾ॥ ಅಶೋಕ್ ಡಿ.ಆರ್, ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ರವರು ಮಾತನಾಡಿ, ಕಂದಾಯ ಇಲಾಖೆಗೆ ಸಂಬಂಧಪಟ್ಟ ಮಾಹಿತಿಗಳಾದ ಹಾಲಿ ವರ್ಷದಲ್ಲಿ ಸಂಗ್ರಹಿಸಲಾದ 1) ಆಸ್ತಿ ತೆರಿಗೆ 2) ಸಂಗ್ರಹಿಸಲಾದ ಆಸ್ತಿ ತೆರಿಗೆ ಮೊತ್ತ 3) ಬಾಕಿ ಇರುವ ಆಸ್ತಿ ತೆರಿಗೆ ಮೊತ್ತ 4) ವಾರಂಟ್ ಜಾರಿ ಮಾಡಲಾಗಿರುವಂತಹ ಆಸ್ತಿ ತೆರಿಗೆದಾರರ ವಿವರಗಳು 5) ಪ್ರಸಕ್ತ ಸಾಲಿನ ಡಿಮ್ಯಾಂಡ್ ಮತ್ತು ಇತರೆ ಎಲ್ಲಾ ಮಾಹಿತಿಗಳೊಂದಿಗೆ ಹಾಗೂ ಸರ್ಕಾರಿ ಜಾಗಗಳನ್ನು ಗುರುತಿಸಿ ಮಾಹಿತಿಗಳೊಂದಿಗೆ ಮುಂದಿನ ಸಭೆಗೆ ಹಾಜರಾಗಲು ಶ್ರೀ ವೆಂಕಟೇಶ್ ಕಂದಾಯ ನಿರೀಕ್ಷಕರು ರವರಿಗೆ ಸೂಚಿಸಿದರು.

ಕ್ರಮ: ಸಹ ಕಂದಾಯ ಅಧಿಕಾರಿಗಳು (ಕೋರಮಂಗಲ)

ಡಾ॥ ಅಶೋಕ್ ಡಿ.ಆರ್, ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ರವರು ಮಾತನಾಡಿ, ಈಜೀಪುರ ವಾರ್ಡ್‌ನ ಕಛೇರಿಗೆ ಬಣ್ಣ ಬಳಿಯುವುದು ಮತ್ತು ಕಛೇರಿಗೆ ಪೀಠೋಪಕರಣಗಳನ್ನು ಅಳವಡಿಸುವುದು, ಶೌಚಾಲಯ ದುರಸ್ಥಿ ಕಾಮಗಾರಿ ಹಾಗೂ ನಾಮ ಫಲಕಗಳ ಅಳವಡಿಕೆ ಮತ್ತು ಮಳೆಗಾಲದಲ್ಲಿ ಉಂಟಾಗುತ್ತಿರುವ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಮೂರು 5 ಹೆಚ್.ಪಿ ಪಂಪ್‌ಗಳನ್ನು ಈಜೀಪುರ ವಾರ್ಡ್‌ಗೆ ಪ್ರತ್ಯೇಕವಾಗಿ ಖರೀದಿಸಲು ಕೊಟೇಷನ್ ಕರೆದು, ಅಂದಾಜುಪಟ್ಟಿಯೊಂದಿಗೆ ಮಾನ್ಯ ಜಂಟಿ ಆಯುಕ್ತರ (ದಕ್ಷಿಣ) ರವರಿಗೆ ಸಲ್ಲಿಸಲು ಸೂಚಿಸಿದರು.

ಕ್ರಮ: ಸ.ಕಾ.ನಿ.ಅ (ಕಾಮಗಾರಿ ಇಲಾಖೆ)

ಡಾ॥ ಅಶೋಕ್ ಡಿ.ಆರ್, ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ರವರು ಮಾತನಾಡಿ, ಬಿ.ಬಿ.ಎಂ.ಪಿ ವತಿಯಿಂದ ಏರ್‌ಪೋರ್ಟ್‌ನಲ್ಲಿರುವ ಶೌಚಾಲಯಗಳ ಮಾದರಿಯಲ್ಲಿ ಪ್ರೀಕ್ಯಾಸ್ಟ್ ತಂತ್ರಗಳನ್ನು ಅಳವಡಿಸಿ, ಶೌಚಾಲಯಗಳನ್ನು ನಿರ್ಮಿಸಲು ಯೋಜಿಸಲಾಗಿದ್ದು, ಅವಶ್ಯಕತೆ ಇರುವಂತಹ ಸಭೆಯಲ್ಲಿ ತೀರ್ಮಾನಿಸಿದ ಸ್ಥಳಗಳಾದ 1) 80 ಅಡಿ ರಸ್ತೆಯ ಪ್ರಾಣಿದಯಾ ಸಂಘದ ಹತ್ತಿರ 2) ಈಜೀಪುರ ಮುಖ್ಯರಸ್ತೆಯ ಶ್ರೀನಿವಾಗಿಲು ಸಿಗ್ನಲ್ ಬಳಿ 3) ಎಸ್.ಟಿ. ಬೆಡ್ ಉದ್ಯಾನವನದ ಬಳಿ 4) ಎನ್.ಜಿ.ವಿ ಆಟದ ಮೈದಾನದ ಬಳಿ ಶೌಚಾಲಯಗಳನ್ನು ನಿರ್ಮಿಸಲು ಸ.ಕಾ.ನಿ.ಅ ಘನತ್ಯಾಜ್ಯ ನಿರ್ವಹಣೆ (ಬಿ.ಟಿ.ಎಂ. ಲೇಔಟ್ ವಿಭಾಗ) ರವರಿಗೆ ಸೂಚಿಸಿದರು.

ಕ್ರಮ: ಸ.ಕಾ.ನಿ.ಅ (ಬಿ.ಟಿ.ಎಂ. ಲೇಔಟ್ ವಿಭಾಗ)

ಶ್ರೀ ಅನಿಲ್ ಕುಮಾರ್ ಮಾತನಾಡಿ, ಬೃಹತ್ ಮಳೆನೀರುಗಾಲುವೆ ಕಾಮಗಾರಿ ನಡೆಯುತ್ತಿದ್ದು, ಬೆಡ್ ಕಾಂಕ್ರೀಟ್ ಹಾಕುವ ಸಮಯದಲ್ಲಿ ಸಮರ್ಪಕವಾಗಿ ನೀರನ್ನು ಪಂಪ್ ಮಾಡಿದ ನಂತರ ಕಾಂಕ್ರೀಟ್ ಹಾಕಲು ಕ್ರಮ ವಹಿಸಲು ಹಾಗೂ ಗುಣಮಟ್ಟ ಕಾಯ್ದುಕೊಳ್ಳಲು ಸಭೆಗೆ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಶ್ರೀ ಜಯಸಿಂಹ, ಸ.ಕಾ.ನಿ.ಅ, ಬೃಹತ್ ಮಳೆನೀರುಗಾಲುವೆ ರವರು ಕಾಮಗಾರಿಯನ್ನು ಮರು ಪರಿಶೀಲಿಸಿ, ನಿರ್ವಹಿಸುವುದಾಗಿ ತಿಳಿಸಿದರು ಹಾಗು ಫೇರ್‌ಲ್ಯಾಂಡ್ ಬಳಿ ಬೃಹತ್ ಮಳೆನೀರುಗಾಲುವೆಗೆ ಅಡ್ಡಲಾಗಿ ಸೇತುವೆ/ಕಲ್ವರ್ಟ್ ಕಾಮಗಾರಿಯನ್ನು ನಿರ್ವಹಿಸಲು ಅಗತ್ಯವಿರುವ ಬದಲಿ ಮಾರ್ಗ ವ್ಯವಸ್ಥೆಯನ್ನು ಕೈಗೊಳ್ಳಲು ಸಹಾಯಕ ಪೋಲಿಸ್ ಆಯುಕ್ತರು, ಸಂಚಾರ ವಿಭಾಗ, ಅಶೋಕ ನಗರ ರವರಿಗೆ ದೂರವಾಣಿ ಮುಖಾಂತರ ಮಾತನಾಡಿ, ಸದರಿಯವರು ಸೂಚಿಸಿರುವಂತೆ ಕಾರ್ಯಪಾಲಕ ಅಭಿಯಂತರರು, ಬೃಹತ್ ಮಳೆನೀರುಗಾಲುವೆ ರವರು ಜಂಟಿ ಪೋಲಿಸ್ ಆಯುಕ್ತರು, ಸಂಚಾರ ವಿಭಾಗ, ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ, ಸದರಿ ಪ್ರಸ್ತಾವನೆಗೆ ಅನುಮೋದನೆಗೆ ಪರಿಗಣಿಸುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕಾರ್ಯಪಾಲಕ ಅಭಿಯಂತರರು, ಬೃಹತ್ ಮಳೆನೀರುಗಾಲುವೆಗೆ ತಿಳಿಸಿದರು.

ಕ್ರಮ: ಕಾ.ಅ (ಬೃಹತ್ ಮಳೆನೀರುಗಾಲುವೆ)

ಕ್ರಮ: ಸಹಾಯಕ ಪೋಲಿಸ್ ಆಯುಕ್ತರು, ಸಂಚಾರ ವಿಭಾಗ, ಅಶೋಕ ನಗರ



Scanned by CamScanner

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾಗಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಅನುಪಾಲನ ವರದಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಿ ಮಾಹಿತಿ ಒದಗಿಸಲು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.


(ಶ್ರೀ. ಪ್ರದೀಪ್ ಕುಮಾರ್ .ಆರ್)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್-148 ಈಜೀಪುರ

(ಡಾ॥ ಅಶೋಕ್ ಡಿ.ಆರ್)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್-148 ಈಜೀಪುರ

Scanned by CamScanner




Scanned by CamScanner




Scanned by CamScanner




Scanned by CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

[illegible]ಕೋ.ಉ.ವಿ/ಪಿ.ಆರ್/05/2020-21

ಸಹಾಯಕ ಕಾರ್ಯಪಾಲಕ ಅಭಿಯಂತರರರ ಕಛೇರಿ,
ಕೋರಮಂಗಲ ಉಪವಿಭಾಗ,
ಪಾಲಿಕೆ ಕಟ್ಟಡಗಳು, 2ನೇ ಅಡ್ಡರಸ್ತೆ,
5ನೇ ಬ್ಲಾಕ್, ಕೋರಮಂಗಲ,
ಬೆಂಗಳೂರು, ದಿನಾಂಕ: 08-12-2020

## ಸಭೆ ಸೂಚನಾ ಪತ್ರ

ಮಾನ್ಯ ಆಯುಕ್ತರ ಕಛೇರಿ ಆದೇಶ ಸಂಖ್ಯೆ:ಐ12(5)/ಪಿಆರ್/35/2020-21, ದಿನಾಂಕ:21-09-2020ರ ರೀತ್ಯಾ ವಾರ್ಡ್ ಸಂಖ್ಯೆ.148 (ಈಜೀಪುರ) ವ್ಯಾಪ್ತಿಯ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ದಿನಾಂಕ:09.12.2020 ರಂದು ಬೆಳಗ್ಗೆ 10.30 ಕ್ಕೆ ಸ್ಥಳ: ಸರ್ಕಾರಿ ಪ್ರಾಥಮಿಕ ಶಾಲೆ, ಈಜೀಪುರ, ಬೆಂಗಳೂರು ಇಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ವಾರ್ಡ್ ಕಮಿಟಿ ಸಭೆಯನ್ನು ನಡೆಸಲು ನಿರ್ಧರಿಸಲಾಗಿದ್ದು, ಸದರಿ ದಿನಾಂಕದಂದು ತಾವುಗಳು ತಪ್ಪದೇ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ. ಈ ಹಿಂದಿನ ಸಭೆಯಲ್ಲಿ ಚರ್ಚಿಸಿದ ತಮ್ಮ ವ್ಯಾಪ್ತಿಗೆ ಬರುವಂತಹ ವಿಷಯಗಳ ಬಗ್ಗೆ ಅನುಪಾಲನ ವರದಿಯನ್ನು ಸಭೆಗೆ ಮಂಡಿಸಲು ಕೋರಿದೆ. ತಮ್ಮ ಗೈರುಹಾಜರಿಯ ಬಗ್ಗೆ ಮಾನ್ಯ ಆಯುಕ್ತರು ರವರ ಗಮನಕ್ಕೆ ತರಲಾಗುವುದು.

ಕಾರ್ಯದರ್ಶಿ, ವಾರ್ಡ್ ಕಮಿಟಿ & ಸಹಾಯಕ ಅಭಿಯಂತರರು
ವಾರ್ಡ್ ನಂ.148 ಈಜೀಪುರ

ಪ್ರತಿಯನ್ನು:-

1. ಜಂಟಿ ಆಯುಕ್ತರು, ದಕ್ಷಿಣ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು, ದಕ್ಷಿಣ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು, ಬಿ.ಟಿ.ಎಂ. ಲೇಔಟ್, ಬಿ.ಬಿ.ಎಂ.ಪಿ
4. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ. ವಿಭಾಗ ರವರಿಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ, ಬಿ.ಬಿ.ಎಂ.ಪಿ. ಬೆಂಗಳೂರು.
6. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ಬಿ.ಟಿ.ಎಂ. ಲೇಔಟ್ ವಿಭಾಗ ರವರಿಗೆ ಸಲ್ಲಿಸುತ್ತಾ, ವಾರ್ಡ್‌ನ ಆರೋಗ್ಯ ಪರಿವೀಕ್ಷಕರು ಹಾಗೂಘನತ್ಯಾಜ್ಯ ನಿರ್ವಹಣೆಯ ಗುತ್ತಿಗೆದಾರರೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
8. ಸಹ ಕಂದಾಯ ಅಧಿಕಾರಿಗಳು, ಕಂದಾಯ ಇಲಾಖೆ, ಕೋರಮಂಗಲ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಬೆಂಗಳೂರು.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿ ದೀಪಗಳ ನಿರ್ವಹಣೆ, ಬಿ.ಬಿ.ಎಂ.ಪಿ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ಬೆಂಗಳೂರು
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ, ದಕ್ಷಿಣ ವಲಯ . ಬೆಂಗಳೂರು
13. ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ದಕ್ಷಿಣ ವಲಯ, ಬೆಂಗಳೂರು.
14. ಠಾಣಾಧಿಕಾರಿಗಳು, ವಿವೇಕನಗರ ಪೋಲಿಸ್ ಠಾಣೆ ರವರಿಗೆ ಸಲ್ಲಿಸಿ, ಸಭೆಗೆ ತಪ್ಪದೇ ಹಾಜರಿರಲು ಕೋರಿದೆ.
15. ಠಾಣಾಧಿಕಾರಿಗಳು, ಕೋರಮಂಗಲ ಪೋಲಿಸ್ ಠಾಣೆ ರವರಿಗೆ ಸಲ್ಲಿಸಿ, ಸಭೆಗೆ ತಪ್ಪದೇ ಹಾಜರಿರಲು ಕೋರಿದೆ.
16. ಕಛೇರಿ ಕಡತಕ್ಕೆ

Scanned by CamScanner